ಇಂದು ದಿನಾಂಕಃ 18.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u>** ಪ್ರತಿವಾದಿಯ ಪರ ಶ್ರೀ.ಎಸ್.ಬಿ.ಜಿ. ವಕೀಲರಿಂದಃ

ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ.

| ಕ್ರ. ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ಪ್ರತಿವಾದಿಯ ಶಾಲಾ ದೃಢೀಕರಣ ಪತ್ರ | ನಿಡಿ-1 |
| 2. | ಪ್ರತಿವಾದಿಯ ಸಹೋದರಿಯರ ಶಾಲಾ ದೃಢೀಕರಣ ಪತ್ರಗಳು | ನಿಡಿ-2 ಮತ್ತು 3 |
| 3. | ಪ್ರತಿವಾದಿ ತಂದೆಯ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲು | ನಿಡಿ-4 |
| 4. | ಪ್ರತಿವಾದಿ ತಂದೆಯ ಆಧಾರ ಕಾರ್ಡ್‌ನ ದೃಢೀಕೃತ ನಕಲು | ನಿಡಿ-5 |
| 5. | ಪ್ರತಿವಾದಿಯರ ಪಡಿತರ ಚೀಟಿಯ ದೃಢೀಕೃತ ನಕಲು | ನಿಡಿ-6 |
| 6. | ಪ್ರತಿವಾದಿ ತಾಯಿಯ ಆಧಾರ ಕಾರ್ಡ್‌ನ ದೃಢೀಕೃತ ನಕಲು | ನಿಡಿ-7 |
| 7. | ಪ್ರತಿವಾದಿ ತಾಯಿಯ ಚುನಾವಣಾ ಗುರುತಿನ ಚೀಟಿಯ ದೃಢೀಕೃತ ನಕಲು | ನಿಡಿ-8 |
| 8. | 1988 ರ ಹಳ್ಳೂರು ಗ್ರಾಮದ ಮತದಾರ ಪಟ್ಟಿಯ ದೃಢೀಕೃತ ನಕಲು | ನಿಡಿ-9 |
| 9. | 2002 ರ ಹಳ್ಳೂರು ಗ್ರಾಮದ ಮತದಾರ ಪಟ್ಟಿಯ ದೃಢೀಕೃತ ನಕಲು | ನಿಡಿ-10 |
| 10. | 2020 ರ ಹಳ್ಳೂರು ಗ್ರಾಮದ ಮತದಾರ ಪಟ್ಟಿಯ ದೃಢೀಕೃತ ನಕಲು | ನಿಡಿ-11 |
| 11. | 2024 ರ ಹಳ್ಳೂರು ಗ್ರಾಮದ ಮತದಾರ ಪಟ್ಟಿಯ ದೃಢೀಕೃತ ನಕಲು | ನಿಡಿ-12 |
| 12. | ಪ್ರತಿವಾದಿಯ ಆಧಾರ ಕಾರ್ಡ್‌ನ ದೃಡೀಕೃತ ನಕಲು | ನಿಡಿ-13 |
| 13. | ಪ್ರತಿವಾದಿಯ ಸಹೋದರಿಯ ಆಧಾರ ಕಾರ್ಡ್‌ನ ದೃಡೀಕೃತ ನಕಲು | ನಿಡಿ-14 |
| 14. | ಪ್ರತಿವಾದಿ ಸಹೋದರಿಯ ಚುನಾವಣಾ ಗುರುತಿನ ಚೀಟಿಯ ದೃಡೀಕೃತ ನಕಲು | ನಿಡಿ-15 |

<u>**ಪಾಟೀ ಸವಾಲು:**</u> ವಾದಿಯ ಪರ ಶ್ರೀ. ಎನ್.ಆರ್.ಕೆ. ವಕೀಲರಿಂದ:

1. ವಾದಿ ನನಗೆ ಅಕ್ಕಳಾಗಬೇಕು. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಹೆಸರಿನಿಂದ ನಮ್ಮ ಹೆಸರಿಗೆ ಆಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಖಾತೆ ಬದಾವಣೆ ಆದ ಆಸ್ತಿ ಪಿತ್ರಾರ್ಜಿತವಾಗಿ ಬಂದಿದ್ದು ಎಂದರೆ ಸರಿ. ಖಾತೆ ಬದಲಾವಣೆ ಕಾಲಕ್ಕೆ ವಾದಿಯದ್ದಾಗಲೀ ಇನ್ನೂಳಿದ ಪ್ರತಿವಾದಿಯರದ್ದಾಗಲೀ ಸಹಿ ತೆಗೆದುಕೊಂಡಿಲ್ಲ ಎಂದರೆ ಸರಿ. ವಾದಿಯನ್ನು ನಿಮ್ಮ ದೊಡ್ಡಪ್ಪರವರು ಸಾಕಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ವಾದಿಯು ನನ್ನ ತಂದೆಯ ಮೊದಲನೇ ಹೆಂಡತಿಯ ಮಗಳಿದ್ದು, ಅವರ ಪೋತಿಯ ನಂತರ ದೊಡ್ಡಪ್ಪರವರು ಸಾಕಿದ್ದು, ಮದುವೆ ನಾವೇ ಮಾಡಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಅವರಿಗೆ ಮದುವೆ ಮಾಡಿ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಗೆ 3 ತೊಲೆ ಬಂಗಾರ ಹಾಗೂ ಅವರ ಪತಿಗೆ 2 ತೊಲೆ ಚೈನ್ ಮಾಡಿಸಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರಸೀದಿ ಹಾಜರುಪಡಿಸಿರುವುದಿಲ್ಲ.

2. ವಾದಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಮದುವೆ ಮಾಡಿಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗಳಲ್ಲಿ ನಾವು ಹೇಳಿದ ಪ್ರಕಾರ ಹೆಸರು ನಮೂದು ಆಗಿರುತ್ತವೆ ಎಂದರೆ ಇರಬಹುದು. ನಾನು ವಯಸ್ಕನಾದ ಮೇಲೆ ಇಲಾಖೆಗೆ ಹೋಗಿ ಗುರುತಿನ ಚೀಟಿಗಾಗಿ ಅರ್ಜಿ ಕೊಟ್ಟರೆ ಕೊಡುತ್ತಾರೆ ಎಂದರೆ ಸರಿ. ನಾವು ಪ್ರತಿವಾದಿ 1ರವರ ಆಸ್ತಿಯಲ್ಲಿ ವಾದಿಯ ಹಿಸ್ಸೆಯನ್ನು ಎತ್ತಿಹಾಕುವ ಉದ್ದೇಶದಿಂದ ನಾವು ಪ್ರತಿವಾದಿ 1ರವರ ವಾರಸುದಾರರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿ 1ರವರ ವಾರಸುದಾರರಾಗಿದ್ದರೆ ವೈಯಕ್ತಿಕ ಪತ್ರದ ಮೂಲಕ ಖಾತೆ ಬದಲಾವಣೆ ಮಾಡಿಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಯಾವುದೇ ವೈಯಕ್ತಿಕ ಪತ್ರ ಮಾಡಿಕೊಂಡಿಲ್ಲ ತಂದೆಯಿಂದ ಮಗನ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 3ರವರು ಪತ್ರಿವಾದಿ 1ರವರ ಹೆಂಡತಿ ಎಂಬ ಬಗ್ಗೆ ಯಾವುದೇ ಲಗ್ನ ಪತ್ರಿಕೆ ಅಥವಾ ಪೋಟೋ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾವು ಪೋಟೋ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾವು 1ನೇ ಪ್ರತಿವಾದಿಯ ವಾರಸುದಾರರು ಎಂಬ ಬಗ್ಗೆ ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ವಾದಿಯು ಆಧಾರ ಕಾರ್ಡ್ ಹಾಗೂ ಅವರ ತಾಯಿಯ ಮರಣ ಪ್ರಮಣ ಪತ್ರ ಕೊಡದ ಕಾರಣ ವಂಶವೃಕ್ಷ ಪ್ರಮಾಣ ಪತ್ರ ಮಾಡಿಸಿಲ್ಲ ಎಂದು ನುಡಿಯುತ್ತಾರೆ.

3. ವಾದಿಯ ತಾಯಿಯ ಮರಣ ಪ್ರಮಾಣ ಪತ್ರ ಸಾರ್ವಜನಿಕ ದಾಖಲೆ ಎಂದರೆ ಸರಿ. ಅರ್ಜಿ ಕೊಟ್ಟರೆ ಮರಣ ಪ್ರಮಾಣ ಪತ್ರ ಕೊಡುತ್ತಾರೆ ಎಂದರೆ ಸಾಕ್ಷಿಯು ಸಂಬಂಧಪಟ್ಟವರು ಹೋದರೆ ಕೊಡುತ್ತಾರೆ ಎಂದು ನುಡಿಯುತ್ತಾರೆ. ನಿಮಗೂ ಹಾಗೂ ವಾದಿ ಕುಸುಮಾಮ ಹಾಗೂ ಪ್ರತಿವಾದಿ 1 ರವರಿಗೆ ಯಾವುದೆ ಸಂಬಂಧ ಇಲ್ಲ ಆದ್ದರಿಂದ ಮರಣ ಪ್ರಮಾಣ ಪತ್ರ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಕುಸುಮಾ ಸಂಬಂಧ ಇಲ್ಲ, ನನಗೆ ಪ್ರತಿವಾದಿ 1 ರವರು ಮಾತ್ರ ಸಂಬಂಧ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ನನಗಾಗಲೀ ಪ್ರತಿವಾದಿ 4 ಮತ್ತು 5 ರವರಿಗಾಗಲೀ ಯಾವುದೇ ಹಿಸ್ಸೆದ ಹಕ್ಕು ಇಲ್ಲ, ವಾದಿಯ ಹಿಸ್ಸೆಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .